**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,**

**ಅರಕಲಗೂಡು.**

**ಸಿ.ಸಿ.ನಂ. 510/2019**

**ದಿನಾಂಕ: 31-07-2025**

ಪಿರ್ಯಾದುದಾರರು : ಶ್ರೀ. ಚನ್ನಯ್ಯ ಬಿನ್ ಕಪ್ಪೆ ಚನ್ನಯ್ಯ

ವಿರುದ್ಧ

ಆರೋಪಿ : ಕೆ.ಎಸ್.ಪ್ರಸನ್ನ, ಶಿಕ್ಷಕರು
ನವೋದಯ ಶಾಲೆ, ಚನ್ನರಾಯಪಟ್ಟಣ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ಆರೋಪಿಯ ವಿಚಾರಣೆ:

ಪ್ರಶ್ನೆ-1: ನೀವು ಪಿರ್ಯಾದಿಯ ಪರ ಮಾಡಿದ ಸಾಕ್ಷಿದಾರರ ಹೇಳಿಕೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ:

ಪ್ರಶ್ನೆ-2: ಪ್ರಾಸಾ-1 ಚನ್ನಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ ನೀವು ಮತ್ತು ಪ್ರಾಸಾ-1-ಚನ್ನಯ್ಯ ಪರಿಚಯಸ್ಥರಾಗಿದ್ದು, ಪರಿಚಯದ ಆಧಾರದ ಮೇಲೆ ನೀವು ನಿಮ್ಮ ದರದ್ದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗಾಗಿ ಮತ್ತು ಕೈಸಾಲವನ್ನು ತೀರಿಸಲು ಪ್ರಾಸಾ-1-ಚನ್ನಯ್ಯನನ್ನು ದಿನಾಂಕ 18-07-2014 ರಂದು ಭೇಟಿ ಮಾಡಿ ರೂ.1,30,000/-ಗಳನ್ನು ಸಾಲವಾಗಿ ಕೇಳಲಾಗಿ ಅದಕ್ಕೆ ಅವರು ಒಪ್ಪಿ ಅದೇ ದಿನ ದಿನಾಂಕ 18-07-2014 ರಂದು ನಿಮಗೆ ರೂ.1,30,000/- ಗಳನ್ನು ಸಾಲವಾಗಿ ಅವರ ಮನೆಯಲ್ಲಿ ನೀಡಿದ್ದು, ಸದರಿ ಸಾಲದ ಹಣವನ್ನು ನೀವು ಒಂದು ತಿಂಗಳ ನಂತರ ಮರುಪಾವತಿ ಮಾಡುವುದಾಗಿ ಹೇಳಿ ಹಣ ಪಡೆದುಕೊಂಡಿರುತ್ತಿರೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದರ ಬಗ್ಗೆ ನೀವೇನು ಹೇಳುವಿರಿ ?

ಉತ್ತರ:

ಪ್ರಶ್ನೆ-3: ಪ್ರಾಸಾ-1-ಚನ್ನಯ್ಯ ಮುಂದುವರೆದು, ಒಂದು ತಿಂಗಳ ನಂತರ ದಿಃ 18.08.2014 ರಂದು ನಿಮ್ಮನ್ನು ಭೇಟಿ ಮಾಡಿ ಸಾಲದ ಹಣವನ್ನು ಕೊಡುವಂತೆ ಕೇಳಿದಾಗ ನೀವು ಸದರಿ ಸಾಲದ ಹಣಕ್ಕೆ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೊಳೆನರಸೀಪುರ ಶಾಖೆಯ ಚೆಕ್ ನಂ.050658 ನ್ನು ದಿನಾಂಕಃ 18.08.2014 ಎಂದು ನಮೂದಿಸಿ, ಚೆಕ್ಕಿನ ದಿನಾಂಕದಂದು ಅಥವಾ ನಂತರದ ದಿನಗಳಲ್ಲಿ ಬ್ಯಾಂಕಿಗೆ ಹಾಜರುಪಡಿಸಿ ಸಾಲದ ಹಣವಾದ ರೂ.1,30,000/-ಗಳನ್ನು ಪಡೆದುಕೊಳ್ಳುವಂತೆ ಹೇಳಿ ಚೆಕ್ ನೀಡಿರುತ್ತೀರೆಂದು ತಮ್ಮ ಸಾಕ್ಷ್ಯ ದಲ್ಲಿ ನುಡಿದಿರುತ್ತಾರೆ, ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-4: ಪ್ರಾಸಾ-1-ಚನ್ನಯ್ಯ ಮುಂದುವರರೆದು ಸದರಿ ಚೆಕ್ಕನ್ನು ನಗಧೀಕರಣಕ್ಕಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೊಳೆನರಸೀಪುರ ಶಾಖೆಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು ನಿಮ್ಮ ಖಾತೆಯನ್ನು ಪರಿಶೀಲಿಸಿ, ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಕಾರಣದೊಂದಿಗೆ ಸದರಿ ಅಮಾನ್ಯಗೊಂಡ ಚೆಕ್ ಮತ್ತು ಹಿಂಬರಹವನ್ನು ಅವರ ಖಾತಾ ಬ್ಯಾಂಕಿಗೆ ದಿನಾಂಕ 30-08-2014 ರಂದು ನೀಡಿರುತ್ತಾರೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-5: ಪ್ರಾಸಾ-1-ಚನ್ನಯ್ಯ ಮುಂದುವರರೆದು ಸದರಿ ಹಿಂಬರಹ ಮತ್ತು ಚೆಕ್ಕನ್ನು ಅವರು ದಿನಾಂಕಃ 10.09.2014 ರಂದು ತನ್ನ ಖಾತಾ ಬ್ಯಾಂಕಿನಿಂದ ಪಡೆದುಕೊಂಡ ನಂತರ ನಿಮಗೆ ಬಾಯಿ ಮಾತಿನ ಮೂಲಕ ತಿಳಿಸಿದ್ದು ನೀವು ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ಅವರು ನಿಮಗೆ ಸೇರಿದ ಚೆಕ್ ಅಮಾನ್ಯಗೊಂಡ ಬಗ್ಗೆ ದಿನಾಂಕಃ10.09.2014 ರಂದು ವಕೀಲರ ಮೂಲಕ ನೊಂದಾಯಿತ ಅಂಚೆ ಮೂಲಕ ಲಿಖಿತ ನೋಟೀಸನ್ನು ನೀಡಿ ನಿಮಗೆ ಹಣ ಮರುಪಾವತಿ ಮಾಡುವಂತೆ ತಿಳಿಸಿದ್ದು, ಸದರಿ ನೋಟೀಸು ನಿಮಗೆ ಖುದ್ದು ಜಾರಿಯಾಗಿದ್ದು ನಿಮಗೆ ವಿಷಯ ತಿಳಿದಿದ್ದರೂ ಸಹ ನೀವು ಮರುತ್ತರವನ್ನು ನೀಡಿರುವುದಿಲ್ಲ ಮತ್ತು ಅವರಿಗೆ ನೀಡಬೇಕಾಗಿರುವ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲವೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-6: ಈ ಬಗ್ಗೆ ನಿಮಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆ-7: ನಿಮಗೆ ಪ್ರತಿರಕ್ಷೆ ಇದೆಯೇ ?

ಉತ್ತರಃ

(ಈ 313 ಹೇಳಿಕೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ತಿದ್ದುಪಡಿ ಮಾಡಿದ ನಂತರ ಸದರಿ 313 ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ. ಈ ಹೊತ್ತು ದಿನಾಂಕ 31 ನೇ  ಜುಲೈ 2025)

**(ಶ್ರೀಮತಿ ಸುಮ ಟಿ.)**
2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ನ್ಯಾಯಾಧೀಶರು, ಅರಕಲಗೂಡು.